# ಕರ್ನಾಟಕ ಲೋಕಾಯುಕ್ತ

ನಂ. ಉಪಲೋಕ್-2/ಡಿಇ-898/2017/ಎ.ಆರ್.ಇ-16

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 10.03.2021.

## ವಿಚಾರಣಾ ವರದಿ

**ಉಪಸ್ಥಿತರು:** **ಸೆಲ್ವಕುಮಾರ್.ಸಿ,** ಅಪರ ನಿಬಂಧಕರು ವಿಚಾರಣೆಗಳು-16,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌ-1 ಶ್ರೀ. **ಜೆ.ಡಿ. ಶಿವಲಿಂಗಯ್ಯ,** ಪರ್ಯಾವೇಕ್ಷಕರು, ತಾಲ್ಲೂಕು ಕಛೇರಿ, ದೊಡ್ಡಬಳ್ಳಾಪುರ ತಾಲ್ಲೂಕು ಮತ್ತು **ಆ.ಸ.ನೌ-2 ಶ್ರೀ ಶ್ರೀಧರ ಎನ್.ಸಿ.,** ಭೂಮಾಪಕರು, ತಾಲ್ಲೂಕು ಕಛೇರಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರುಗಳ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**
1. ಕಂಪ್ಲೆಂಟ್/ಉಪಲೋಕ್/ಬಿಡಿ/1233/2014/ಸನಿಕಾಸ-2 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 29/11/2016.
2. ಸರ್ಕಾರಿ ಆದೇಶ ಸಂಖ್ಯೆ: ಕಂಇ 18 ಭೂದಾಸೇ (3) 2017, ಬೆಂಗಳೂರು ದಿನಾಂಕ: 03.07.2017.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-2/ಡಿಇ/898/2017, ಬೆಂಗಳೂರು ದಿನಾಂಕ: 21.07.2017.
4. O.M. No.Uplok-1 & 2/DE/Transfers/ 2020, dated 28/05/2020.

* * * *

ದೂರುದಾರರಾದ ಶ್ರೀಮತಿ ಡಿ. ಮಂಜುಳ ಕೋಂ ಜಿ. ಕೃಷ್ಣಮೂರ್ತಿ, ನಂ. 147, ಭುವನೇಶ್ವರಿ ದೇವಸ್ಥಾನದ ಸಮೀಪ, ನೆಲಮಂಗಲ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ **(ಇನ್ನು ಮುಂದೆ ದೂರುದಾರರೆಂದು ಕರೆಯಲ್ಪಡುತ್ತಾರೆ)** ರವರು ಆ.ಸ.ನೌ-1 ಶ್ರೀ. **ಜೆ.ಡಿ. ಶಿವಲಿಂಗಯ್ಯ,** ಪರ್ಯಾವೇಕ್ಷಕರು, ತಾಲ್ಲೂಕು ಕಛೇರಿ, ದೊಡ್ಡಬಳ್ಳಾಪುರ ತಾಲ್ಲೂಕು ಮತ್ತು **ಆ.ಸ.ನೌ-2 ಶ್ರೀ ಶ್ರೀಧರ ಎನ್.ಸಿ.,** ಭೂಮಾಪಕರು, ತಾಲ್ಲೂಕು ಕಛೇರಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು

ಗ್ರಾಮಾಂತರ ಜಿಲ್ಲೆ ರವರುಗಳ (**ಇನ್ನು ಮುಂದೆ ಕ್ರಮವಾಗಿ ಆಪಾದಿತ ಸರ್ಕಾರಿ ನೌಕರ-1 ಮತ್ತು 2 ಎಂದು ಕರೆಯಲ್ಪಡುತ್ತಾರೆ**) ಸರ್ಕಾರಿ ನೌಕರರಾಗಿದ್ದು, ದೂರುದಾರರು ದೂರು ಅರ್ಜಿಯನ್ನು ಸಲ್ಲಿಸಿ ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ದರ್ಗಜೋಗಹಳ್ಳಿ ಗ್ರಾಮದ ಸರ್ವೆ ನಂ. 9/2 ಕ್ಷೇತ್ರ 9 ಗುಂಟೆ ಜಮೀನು ಶ್ರೀಮತಿ ಮಂಜುಳ.ಡಿ. ಕೋಂ ಜಿ. ಕೃಷ್ಣಮೂರ್ತಿ ಇವರಿಗೆ ಸೇರಿದ್ದು, ಈ ಜಮಿನಿನ ಗಡಿಕಲ್ಲುಗಳು ನಾಸವಾಗಿರುವುದರಿಂದ ಇದನ್ನು ಅಳತೆ ಮಾಡಿ ಗಡಿ ಗುರುತಿಸಿ ಕಲ್ಲು ನೆಡುವಂತೆ ಅರ್ಜಿ ಸಲ್ಲಿಸಿದರೂ ಆಪಾದಿತ ಸರ್ಕಾರಿ ನೌಕರ-1 ಮತ್ತು 2 ರವರುಗಳು ಅಳತೆ ಮಾಡಿರುವುದಿಲ್ಲ. ಹಣದ ಆಸೆಗಾಗಿ ಕೇವಲ ಭೂ ಮಾಲೀಕರ ಜಮೀನುಗಳನ್ನು ಮಾತ್ರ ಅಳತೆ ಮಾಡುತ್ತಿದ್ದಾರೆ. ಆದ್ದರಿಂದ, ಸದರಿಯವರ ವಿರುದ್ಧ ಸೂಕ್ತ ಕ್ರಮಕೈಗೊಂಡು ನ್ಯಾಯ ದೊರಕಿಸಿಕೊಡಬೇಕೆಂದು ದೂರು ಸಲ್ಲಿಸಿರುತ್ತಾರೆ. ಸದರಿ ದೂರಿನ ಮೇಲೆ ಕ್ರಮವಹಿಸಿದ್ದು, ಪರಿಶೀಲಿಸಲಾಗಿ ಮೇಲ್ನೋಟಕ್ಕೆ ಆ.ಸ.ನೌ-1 ಶ್ರೀ. **ಜೆ.ಡಿ. ಶಿವಲಿಂಗಯ್ಯ,** ಮತ್ತು **ಆ.ಸ.ನೌ-2** ಶ್ರೀ **ಶ್ರೀಧರ ಎನ್.ಸಿ.,** ರವರುಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಆರೋಪಿತ ನೌಕರ ಸರ್ಕಾರಿ/ಸಾರ್ವಜನಿಕ ಸೇವಕರಾಗಿದ್ದು ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಮತ್ತು ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮ 3(1) (i) ರಿಂದ (iii ) ರಲ್ಲಿ ಹೇಳಿದಂತೆ ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯಸ್ಥರಾಗಿದ್ದಾರೆಂದು ಕಂಡು ಬಂದಿದ್ದರಿಂದ ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಗೌರವಾನ್ವಿತ ಉಪಲೋಕಾಯುಕ್ತ, ಕರ್ನಾಟಕ ಇವರಿಗೆ ಒಪ್ಪಿಸುವಂತೆ ಶಿಫಾರಸ್ಸು ಮಾಡಿದ್ದು, ಉಲ್ಲೇಖ-2 ರಂತೆ ಸರ್ಕಾರವು ಆಪಾದಿತ ಸರ್ಕಾರಿ ನೌಕರ-1 ಶ್ರೀ ಜೆ.ಡಿ. ಶಿವಲಿಂಗಯ್ಯ, ಪರ್ಯಾವೇಕ್ಷಕರು, ಈಗಾಗಲೇ ಸೇವೆಯಿಂದ ವಯೋ ನಿವೃತ್ತಿ ಹೊಂದಿರುವುದರಿಂದ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು-1958 ರ ನಿಯಮ **214 (2) (ಬಿ) (i)** ರನ್ವಯ ಮತ್ತು ಆಪಾದಿತ ಸರ್ಕಾರಿ ನೌಕರ-2 ಶ್ರೀ ಶ್ರೀಧರ್ ಎನ್.ಸಿ. ಭೂಮಾಪಕರು ರವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1958 ರ ನಿಯಮ-**14 ಎ** ರಡಿಯಲ್ಲಿ ಇಲಾಖಾ ವಿಚಾರಣೆಯನ್ನು ನಡೆಸುವಂತೆ ಲೋಕಾಯುಕ್ತ ಸಂಸ್ಥೆಗೆ ವಹಿಸಿದ್ದು,

ಅದರನುಸಾರ ಗೌರವಾನ್ವಿತ ಉಪಲೋಕಾಯುಕ್ತರು-2 ರವರ ನಾಮನಿರ್ದೇಶನ ಆದೇಶ ಸಂಖ್ಯೆ ಉಪಲೋಕ್-2/ಡಿಇ/898/2017 ಬೆಂಗಳೂರು ದಿನಾಂಕ 21/07/2017 ರಂತೆ ಆ.ಸ.ನೌ-1 ಶ್ರೀ. **ಜೆ.ಡಿ. ಶಿವಲಿಂಗಯ್ಯ,** ಪರ್ಯಾವೇಕ್ಷಕರು, ತಾಲ್ಲೂಕು ಕಛೇರಿ, ದೊಡ್ಡಬಳ್ಳಾಪುರ ತಾಲ್ಲೂಕು ಮತ್ತು **ಆ.ಸ.ನೌ-2** ಶ್ರೀ ಶ್ರೀಧರ ಎನ್.ಸಿ., ಭೂಮಾಪಕರು, ತಾಲ್ಲೂಕು ಕಛೇರಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರುಗಳ ವಿರುದ್ಧದ ಇಲಾಖಾ ವಿಚಾರಣೆ ಕುರಿತು ದೋಷಾರೋಪಣೆ ತಯಾರು ಮಾಡಿ ಇಲಾಖಾ ವಿಚಾರಣೆ ಮಾಡಿ ವರದಿ ಸಲ್ಲಿಸಲು ಅಪರ ನಿಬಂಧಕರು, ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಿರುತ್ತಾರೆ. ಉಲ್ಲೇಖ-4 ರಂತೆ ಅಪರ ನಿಬಂಧಕರು, ವಿಚಾರಣೆಗಳು-10 ರವರಿಂದ ಈ ವಿಚಾರಣಾ ಪ್ರಾಧಿಕಾರವಾದ ಅಪರ ನಿಬಂಧಕರು, ವಿಚಾರಣೆಗಳು-16 ರವರಿಗೆ ವರ್ಗಾವಣೆಗೊಂಡಿರುತ್ತದೆ.

(2) ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ. ರವರ ವಿರುದ್ಧ ದೋಷಾರೋಪಣೆ (Articles of Charge) ಅನ್ನು ಅಪರ ನಿಬಂಧಕರು, ವಿಚಾರಣೆಗಳು-10 ರವರು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌ ರವರಿಗೆ ದಿನಾಂಕ: 22/08/2017 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

**ಅನುಬಂಧ-1**

**ದೋಷಾರೋಪಣೆ-1**

2. 1ನೇ ಆಪಾದಿತ ಸರ್ಕಾರಿ ನೌಕರ ಆದ ಶ್ರೀ ಜೆ.ಡಿ. ಶಿವಲಿಂಗಯ್ಯ, ಪರ್ಯಾವೇಕ್ಷಕರು, ದೊಡ್ಡಬಳ್ಳಾಪುರ ತಾಲ್ಲೂಕು ಕಛೇರಿ, 2ನೇ ಆಪಾದಿತ ಸರ್ಕಾರಿ ನೌಕರ ಶ್ರೀ ಶ್ರೀಧರ್ ಎನ್.ಸಿ. ಭೂಮಾಪಕರು, ದೊಡ್ಡಬಳ್ಳಾಪುರ ತಾಲ್ಲೂಕು ಕಛೇರಿ ಆದ ನೀವುಗಳು, ದೂರುದಾರರಾದ

ಶ್ರೀಮತಿ ಮಂಜುಳ ಇವರು ದೊಡ್ಡಬಳ್ಳಾಪುರ ತಾಲ್ಲೂಕು ದರ್ಗಾ ಜೋಗಿಹಳ್ಳಿ ಗ್ರಾಮದ ಸರ್ವೆ ನಂ. 9/2 ವಿಸ್ತೀರ್ಣ 9 ಗುಂಟೆಗೆ ಗಡಿಕಲ್ಲು ನಾಶವಾಗಿರುವುದರಿಂದ ಅಳತೆ ಮಾಡಿ, ಗಡಿ ಗುರುತಿಸಿ ಕಲ್ಲು ನೆಡುವಂತೆ ಅರ್ಜಿಯನ್ನು ಸಲ್ಲಿಸಿದರೂ ಸಹ, 1 ಮತ್ತು 2ನೇ ಆ.ಸ.ನೌಕರರಾದ ನೀವು ದಿನಾಂಕ 03.01.2014 ರಂದು ಅಳತೆಯನ್ನು ಮಾಡದೆ, ಸುಳ್ಳು ಮಹಜರ್ ವರದಿಯನ್ನು ಸಲ್ಲಿಸಿದ್ದೀರಿ.

ಆದಕಾರಣ ಆಪಾದಿತ ಸರ್ಕಾರಿ ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಆಪಾದಿತ ಸರ್ಕಾರಿ ನೌಕರರಾದ ನೀವು ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮಾವಳಿ 1966ರ ನಿಯಮ (3)(1) (i) ರಿಂದ (iii)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ.

## *ಅನುಬಂಧ-2*

## **ದೋಷಾರೋಪಣೆಯ ವಿವರ**

(ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡೆಕ್ಟ್)

**ದೂರಿನ ಸಂಕ್ಷಿಪ್ತ ವಿವರಣೆ :**

ದೂರುದಾರರು ತಮ್ಮ ದೂರಿನಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕು ದರ್ಗಾಜೋಗಿಹಳ್ಳಿ ಗ್ರಾಮದ ಸ.ನಂ.9/2 ಕ್ಷೇತ್ರ 9 ಗುಂಟೆ ಜಮೀನು ದೂರುದಾರರದ್ದಾಗಿದ್ದು ಈ ಜಮೀನಿನ ಗಡಿ ಕಲ್ಲುಗಳು ನಾಶವಾಗಿರುವುದರಿಂದ ಇದನ್ನು ಅಳತೆ ಮಾಡಿ ಗಡಿ ಗುರುತಿಸಿ ಕಲ್ಲು ನೆಡುವಂತೆ ಆ.ಸ.ನೌಕರರಿಗೆ ಅರ್ಜಿ ಸಲ್ಲಿಸಿದರೂ ಸಹ ಜಮೀನನ್ನು ಅಳತೆ ಮಾಡಿರುವುದಿಲ್ಲ. ಆ.ಸ.ನೌಕರರು ಹಣದ ಆಸೆಗಾಗಿ ಕೇವಲ ಭೂಮಾಲಿಕರ ಜಮೀನುಗಳನ್ನು ಮಾತ್ರ ಅಳತೆ ಮಾಡುತ್ತಿದ್ದಾರೆ. ಆದ್ದರಿಂದ ಆ.ಸ.ನೌಕರರ ವಿರುದ್ಧ ಸೂಕ್ತ ಕ್ರಮ ಕೈಗೊಂಡು ತನಗೆ ನ್ಯಾಯ ದೊರಕಿಸಿಕೊಡಬೇಕೆಂದು ದೂರು ಸಲ್ಲಿಸಿದ್ದಾರೆ.

1. 1ನೇ ಆ.ಸ.ನೌಕರರು ತಮ್ಮ ಆಕ್ಷೇಪಣೆಯಲ್ಲಿ ಭೂಮಾಪಕರು ಜಮೀನಿನ ಮೋಜಣಿ ದಿನಾಂಕವನ್ನು ನಿಗದಿಪಡಿಸಿ ಮೋಜಣಿ ಮಾಡಲು ಹೋದಾಗ ದೂರುದಾರರ ಗಂಡ ಸ್ಥಳದಲ್ಲಿ ಹಾಜರಿರುವುದಿಲ್ಲ ಮತ್ತು ಅವರು ಭೂಮಾಪಕರ ವರದಿಗೆ ಸಹಿ ಮಾಡಲು ನಿರಾಕರಿಸಿರುತ್ತಾರೆ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

2. 2ನೇ ಆ.ಸ.ನೌಕರರು ತಮ್ಮ ಆಕ್ಷೇಪಣೆಯಲ್ಲಿ ದಿ: 17.11.2013 ರಂದು ಜಮೀನಿನ ಅಳತೆ ಮಾಡುವ ಸಲುವಾಗಿ ಹಾಜರಿರುವಂತೆ ಅರ್ಜಿದಾರರಿಗೆ ನೋಟೀಸು ನೀಡಿದ್ದು ಅವರು ನೋಟೀಸು ಪಡೆಯದೆ ಆ ದಿನ ಸ್ಥಳಕ್ಕೆ ಹಾಜರಾಗಿ ಜಮೀನು ಅಳತೆ ಮಾಡಿದ ನಂತರ ತಮ್ಮ ವರದಿಗೆ ಸಹಿ ಮಾಡಲು ನಿರಾಕರಿಸಿರುತ್ತಾರೆ. ಆಗ ಸ್ಥಳದಲ್ಲಿ ಹಾಜರಿದ್ದ ಗ್ರಾಮಸ್ಥರ ಸಹಿ ಪಡೆದು ವರದಿ ಸಲ್ಲಿಸಲಾಗಿದೆ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

3. ದೂರುದಾರರು ಪ್ರತ್ಯುತ್ತರ ಸಲ್ಲಿಸಿರುವುದಿಲ್ಲ.

4. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ;

ಅ) "ದೂರುದಾರರು ಜಮೀನು ಮೋಜಣಿ ಮಾಡುವಂತೆ ಕೋರಿ ಸರ್ಕಾರಕ್ಕೆ ಹಣ ಕಟ್ಟಿದ ರಶೀದಿ ಆ.ಸ.ನೌಕರರಿಗೆ ಸಲ್ಲಿಸಿದ ಅರ್ಜಿಯ ಪ್ರತಿಗಳನ್ನು ಲಗತ್ತಿಸಿರುತ್ತಾರೆ. ಆದರೆ ಆ.ಸ.ನೌಕರರು ಕೇವಲ ಹಣದ ಆಸೆಗಾಗಿ ಭೂಪರಿವರ್ತಿತ ಜಮೀನುಗಳಿಗೆ ಮಾತ್ರ ಮೋಜಣಿ ಮಾಡಲು ಹೋಗಿ ದೂರುದಾರರ ಕೃಷಿ ಜಮೀನಿಗೆ ಮೋಜಣಿ ಮಾಡಲು ಹೋಗಿರುವುದಿಲ್ಲವೆಂದು ದೂರಿನಲ್ಲಿ ತಿಳಿಸಿದ್ದಾರೆ.

ಆ) ಆ.ಸ.ನೌಕರರು ತಮ್ಮ ಆಕ್ಷೇಪಣೆಯೊಂದಿಗೆ ಮೋಜಣಿ ವರದಿ ಸಲ್ಲಿಸಿದ್ದು ಇದರಲ್ಲಿ ದಿ: 3.1.2014 ರಂದು ಜಮೀನನ್ನು ಅಳತೆ ಮಾಡಿ ಗ್ರಾಮಸ್ಥರ ಸಹಿ ಪಡೆದ ಬಗ್ಗೆ ಮಹಜರ್ ಸಲ್ಲಿಸಿರುತ್ತಾರೆ. ಒಂದು ವೇಳೆ ಆ.ಸ.ನೌಕರರು ಜಮೀನನ್ನು ಅಳತೆ ಮಾಡಿ ವರದಿ ಸಲ್ಲಿಸಿದ್ದರೆ ದೂರುದಾರರು ಏಕೆ ಈ ದೂರನ್ನು ಸಲ್ಲಿಸುತ್ತಿದ್ದರು ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ಆ.ಸ.ನೌಕರರ ಪ್ರಕಾರ ದಿ: 3.1.2014 ರಂದು ಮಹಜರ್ ವರದಿಗೆ ಗ್ರಾಮಸ್ಥರ ಸಹಿ ಪಡೆದದ್ದು ಕಂಡು ಬರುತ್ತದೆ. ಆದರೆ ದೂರನ್ನು ದಿ: 5.5.2014 ರಂದು ನೀಡಿರುತ್ತಾರೆ. ಅಂದರೆ ಆ.ಸ.ನೌಕರರು ದೂರುದಾರರ ಜಮೀನನ್ನು ಮೋಜಣಿ ಮಾಡದೆ ಸುಳ್ಳು ಮಹಜರ್ ಅನ್ನು ತಯಾರಿಸಿದ್ದಾರೆಂದು ಕಂಡು ಬರುತ್ತದೆ.

ಇ) ದೂರುದಾರರ ಗಂಡ ಭೂಮಾಪಕರ ವರದಿಗೆ ಸಹಿ ಮಾಡಲು ನಿರಾಕರಿಸಿರುತ್ತಾರೆಂದು ತಿಳಿಸಿದ್ದು ಆದರೆ ಏಕೆ ಸಹಿ ಮಾಡಲು ನಿರಾಕರಿಸಿರುತ್ತಾರೆಂದು ವರದಿಯಲ್ಲಿ ನಮೂದಿಸಿರುವುದಿಲ್ಲ. ಆದ್ದರಿಂದ ಯಾವುದೇ ಕಾರಣವಿಲ್ಲದೆ ಸಹಿ ಮಾಡಲು ನಿರಾಕರಿಸಿರುತ್ತಾರೆಂದು ವರದಿ ಸಲ್ಲಿಸಿರುವುದು ಆ.ಸ.ನೌಕರರು ದೂರುದಾರರ ಜಮೀನನ್ನು ಅಳತೆ ಮಾಡದೆ ಖೊಟ್ಟಿ ವರದಿಯನ್ನು ತಯಾರಿಸಿ ಸಲ್ಲಿಸಿರುತ್ತಾರೆಂದು ಕಂಡು ಬರುತ್ತದೆ. ದೂರುದಾರರು ಕಾನೂನು ಪ್ರಕಾರ ಅರ್ಜಿ ಸಲ್ಲಿಸಿ ಹಣ ಪಾವತಿಸಿದ್ದಾರೆ. ಆದರೆ ಆ.ಸ.ನೌಕರರು ದೂರುದಾರರ ಜಮೀನನ್ನು ಮೋಜಣಿ ಮಾಡದೆ ಕರ್ತವ್ಯಲೋಪವೆಸಗಿದ್ದಾರೆಂದು ಮೇಲ್ನೋಟಕ್ಕೆ ಕಂಡು ಬರುತ್ತದೆ.

5. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು ಆ.ಸ.ನೌಕರರು ನೀಡಿರುವ ಉತ್ತರಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಆ.ಸ.ನೌಕರರು ತಮ್ಮ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

6. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳು, ಆ.ಸ.ನೌಕರರು ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

ಅದಲ್ಲದೆ, 1 ಮತ್ತು 2ನೇ ಆ.ಸ.ನೌಕರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ಅಡಿಯಲ್ಲಿ ಆಪಾದಿತ ಸರ್ಕಾರಿ ನೌಕರರ ವಿರುದ್ಧ ಇಲಾಖಾ ವಿಚಾರಣೆಗೆ ಶಿಫಾರಸ್ಸು ಮಾಡಲಾಗಿ, ಹಾಗೂ 1ನೇ ಆ.ಸ.ನೌಕರರು ದಿನಾಂಕ: 30.3.2015 ರಂದು ಈಗಾಗಲೇ ನಿವೃತ್ತಿ ಹೊಂದಿರುವುದರಿಂದ, ಕೆ.ಸಿ.ಎಸ್.ಆರ್. ನಿಯಮ 214(2)ಬಿ(i)ರ ಅಡಿ ಇಲಾಖಾ ವಿಚಾರಣೆಗೆ ಅನುಮತಿಯನ್ನು ನೀಡಿ ಸರ್ಕಾರಿ ನೌಕರರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಶಿಸ್ತು ಪ್ರಾಧಿಕಾರಿಯಾದ ಸರ್ಕಾರ ಉಲ್ಲೇಖ (1)ರ ಆದೇಶದಲ್ಲಿ ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಹಿಸಿದ್ದು, ಗೌರವಾನ್ವಿತ ಉಪಲೋಕಾಯುಕ್ತರವರು ಅಪರ ನಿಬಂಧಕರು (ವಿಚಾರಣೆಗಳು–10) ಇವರನ್ನು ವಿಚಾರಣೆ ನಡೆಸಲು ನೇಮಕ ಮಾಡಿದ್ದಾರೆ. ಆದ್ದರಿಂದ, **ನಿಮ್ಮ ಮೇಲೆ ಈ ಮೇಲ್ಕಂಡಂತೆ ದೋಷಾರೋಪಣೆ.**

(3) ಈ ಮೇಲ್ಕಂಡ ದೋಷಾರೋಪಣೆ (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌ–1 ಮತ್ತು 2 ರವರುಗಳಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ.–1 ಮತ್ತು 2 ರವರುಗಳು ದಿನಾಂಕ 12/09/2017 ರಂದು ವಿಚಾರಣಾಧಿಕಾರಿಯವರ ಮುಂದೆ ಹಾಜರಾಗಿದ್ದು, ಸದರಿಯವರ ಪ್ರಥಮ ಮೌಖಿಕ ಹೇಳಿಕೆ, ನಿಯಮ–11 ಕೆ.ಸಿ.ಎಸ್. (ಸಿಸಿಎ) ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ.

ಆ.ಸ.ನೌ.–1 ಮತ್ತು 2 ರವರುಗಳು ತಪ್ಪೊಪ್ಪಿಕೊಳ್ಳದೆ ಆರೋಪಗಳ ವಿಚಾರಣೆಯನ್ನು ಬಯಸಿರುತ್ತಾರೆ.

4) ಆ.ಸ.ನೌ–1 ಮತ್ತು 2 ರವರುಗಳಿಗೆ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

5) ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌ.–1 ಮತ್ತು 2 ರವರುಗಳು ತಮ್ಮ ಪರವಾಗಿ ದಿನಾಂಕ 16/10/2017 ರಂದು ರಕ್ಷಣಾ ಹೇಳಿಕೆಯನ್ನು ಸಲ್ಲಿಸಿ, ಸದರಿ ಆರೋಪಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿದ್ದು, ತಾವು ದುರ್ನಡತೆ ಹಾಗೂ ಕರ್ತವ್ಯ ಲೋಪ ಎಸಗಿರುವುದಿಲ್ಲ ತಾವು ಸರ್ಕಾರಿ ಕೆಲಸವನ್ನು ಪ್ರಾಮಾಣಿಕವಾಗಿ ಕಾನೂನಿನ ಚೌಕಟ್ಟಿನಲ್ಲಿ ನಿರ್ವಹಿಸಿದ್ದು, ದುರ್ನಡತೆಯಿಂದ ನಡೆದುಕೊಂಡಿರುವುದಿಲ್ಲವೆಂದು, ಆದ್ದರಿಂದ, ತಮ್ಮನ್ನು ಈ ಆರೋಪದಿಂದ ಕೈಬಿಡುವಂತೆ ವಿನಂತಿಸಿರುತ್ತಾರೆ.

6) ಈ ವಿಚಾರಣೆಯಲ್ಲಿ, ಆ.ಸ.ನೌ.–1 ಮತ್ತು 2 ರವರುಗಳ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರಾದ ಶ್ರೀಮತಿ **ಡಿ. ಮಂಜುಳಾ** ರವರನ್ನು **ಪಿ.ಡಬ್ಲ್ಯೂ–1** ಎಂದು ಸಾಕ್ಷ್ಯ ನುಡಿಸಿಕೊಂಡು **ನಿ.ಪಿ.1 ರಿಂದ 16** ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿದ್ದು, ಶ್ರೀ **ಮಲ್ಲಿಕಾರ್ಜುನ ಈಶ್ವರಪ್ಪ ಕಮತಗಿ,** ಹಿಂದಿನ ಸಹಾಯಕ ನಿಬಂಧಕರು, ಕಾನೂನು ಸಲಹೆ–2, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರನ್ನು **ಪಿ.ಡಬ್ಲ್ಯೂ–2** ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ–17 ಮತ್ತು 17(ಎ)

ದಾಖಲಾತಿಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ. ತದನಂತರ, ಆ.ಸ.ನೌ.–1 ಮತ್ತು 2 ರವರುಗಳ ದ್ವಿತೀಯ ಮೌಖಿಕ ಹೇಳಿಕೆಯನ್ನು ದಿನಾಂಕ 21/06/2018 ರಂದು ಪಡೆದುಕೊಳ್ಳಲಾಗಿರುತ್ತದೆ.

7) **ಆ.ಸ.ನೌ.–2** ರವರು ತಮ್ಮ ಪರವಾಗಿ ತಾವೇ **ಡಿ.ಡಬ್ಲ್ಯೂ–1** ಎಂದು ಸಾಕ್ಷ್ಯ ನುಡಿದಿದ್ದು, **ನಿ.ಡಿ.–2 ರಿಂದ 6** ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ, **ಆ.ಸ.ನೌ–1** ರವರು ತಮ್ಮ ಪರವಾಗಿ ತಾವೆ **ಡಿ.ಡಬ್ಲ್ಯೂ–2** ಎಂದು ಮೌಖಿಕ ಸಾಕ್ಷ್ಯ ನುಡಿದಿದ್ದು, **ನಿ.ಡಿ.–7** ದಾಖಲಾತಿಯನ್ನು ಗುರುತಿಸಿಕೊಂಡಿರುತ್ತಾರೆ. ಸಾಕ್ಷಿ ಶ್ರೀ **ಎಂ.ಪಿ ನಾಗರಾಜು** ಬಿನ್ ಎಂ.ಎನ್. ಪುಟ್ಟಣ್ಣ, ಚಿಕ್ಕಣ್ಣಪ್ಪ ಕಲ್ಯಾಣ ಮಂಟಪ, ತ್ಯಾಗರಾಜನಗರ, ದೊಡ್ಡಬಳ್ಳಾಪುರ ರವರನ್ನು **ಡಿ.ಡಬ್ಲ್ಯೂ–3** ಎಂದು, ಸಾಕ್ಷಿ ಶ್ರೀ **ಖಾದರ್ ಸಾಬ್** ಬಿನ್ ಸೈಯದ್ ಕಾಸೀಮ್, ಧರಗ ಜೋಗಹಳ್ಳಿ, ದೊಡ್ಡಬಳ್ಳಾಪುರ ತಾಲ್ಲೂಕು ರವರನ್ನು **ಡಿ.ಡಬ್ಲ್ಯೂ–4** ಎಂದು ಮತ್ತು ಸಾಕ್ಷಿ ಶ್ರೀ **ನಜೀರ್ ಅಹಮದ್** ಬಿನ್ ಪಯಾಜ್ ಅಹಮದ್, ನಂ. 113, ಚಿಕ್ಕಪೇಟೆ, ಬಾಳೆಕಾಯಿ ಮಂಡಿಯ ಹತ್ತಿರ, ದೊಡ್ಡಬಳ್ಳಾಪುರ ತಾಲ್ಲೂಕು ರವರನ್ನು **ಡಿ.ಡಬ್ಲ್ಯೂ–5** ಎಂದು ಸಾಕ್ಷ್ಯ ನುಡಿದಿರುತ್ತಾರೆ.

8) ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌ ರವರ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

9) ವಾದ ವಿವಾದದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

10) ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ.

**ಅಂಶ 1: ಸಕಾರಾತ್ಮಕವಾಗಿದೆ.**

**ಅಂಶ 2: ಅಂತಿಮ ಆದೇಶದಂತೆ**

## ಕಾರಣಗಳು:

11) ಈ ವಿಚಾರಣೆಯಲ್ಲಿ, ಆ.ಸ.ನೌ.–1 ಮತ್ತು 2 ರವರುಗಳ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರಾದ ಶ್ರೀಮತಿ **ಡಿ. ಮಂಜುಳಾ** ರವರನ್ನು **ಪಿ.ಡಬ್ಲ್ಯೂ–1** ಎಂದು ಸಾಕ್ಷ್ಯ ನುಡಿಸಿಕೊಂಡು **ನಿ.ಪಿ.1 ರಿಂದ 16** ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿದ್ದು, ಶ್ರೀ **ಮಲ್ಲಿಕಾರ್ಜುನ ಈಶ್ವರಪ್ಪ ಕಮತಗಿ,** ಹಿಂದಿನ ಸಹಾಯಕ ನಿಬಂಧಕರು, ಕಾನೂನು ಸಲಹೆ–2, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರನ್ನು ಪಿ.ಡಬ್ಲ್ಯೂ–2 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ–17 ಮತ್ತು 17(ಎ) ದಾಖಲಾತಿಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ.

ದೂರುದಾರರು ದಿನಾಂಕ 03/05/2014 ರಂದು ಈ ಲೋಕಾಯುಕ್ತ ಸಂಸ್ಥೆಗೆ ಸಲ್ಲಿಸಿದ ದೂರನ್ನು **ನಿ.ಪಿ–1** ಎಂದು, ದಿನಾಂಕ 05.05.2014 ರ ಪ್ರಪತ್ರ–1 ಮತ್ತು 2 ನ್ನು **ನಿಪಿ–2** ಮತ್ತು

**ನಿಪಿ–3** ಎಂದು, ದೂರುದಾರರು ದಿನಾಂಕ 18.09.2003 ರಂದು ಆಪಾದಿತ ಸರ್ಕಾರಿ ನೌಕರರುಗಳಿಗೆ ಸಲ್ಲಿಸಿದ ಮನವಿ ಪತ್ರದ ಪ್ರತಿ **ನಿ.ಪಿ–4** ಎಂದು, ದಿನಾಂಕ 17.09.2013 ರ ಟ್ರಜರಿ ಚಲನ್ ಪ್ರತಿ **ನಿ.ಪಿ–5** ಎಂದು, ದೂರುದಾರರು ತಹಶೀಲ್ದಾರ್ ರವರಿಗೆ ನೀಡಿದ ದಿನಾಂಕ 07.03.2014 ಪತ್ರದ ಪ್ರತಿ **ನಿ.ಪಿ–6** ಎಂದು, ದೂರುದಾರರು ತಹಶೀಲ್ದಾರ್ ರವರಿಗೆ ನೀಡಿದ ದಿನಾಂಕ 10.03.2014 ಮತ್ತೊಂದು ಪತ್ರದ ಪ್ರತಿ **ನಿ.ಪಿ–7** ಎಂದು, ಸರ್ವೆ ನಂ. 9/2 ಸ್ಕೆಚ್‌ನ ಪ್ರತಿ **ನಿ.ಪಿ–8** ಎಂದು, ದಿನಾಂಕ 06.05.1993 ರಂದು ದೂರುದಾರರ ಪತಿಗೆ ನೀಡಿದ ನೋಟಿಸ್ ಪ್ರತಿ **ನಿ.ಪಿ–9** ಎಂದು, ಸರ್ವೆ ನಂ. 9/2 ದಿನಾಂಕ 16/05/1993 ರ ಸ್ಕೆಚ್‌ನ ಪ್ರತಿ **ನಿ.ಪಿ–10** ಎಂದು, ದಿನಾಂಕ 16/05/1993 ರ ಮಹಜರ್ ಪ್ರತಿ **ನಿ.ಪಿ–11** ಎಂದು, ಸರ್ವೆ ನಂ. 9/2 ರ ಆರ್.ಟಿ.ಸಿ. ಪ್ರತಿ **ನಿ.ಪಿ–12** ಎಂದು, ಸರ್ವೆ ನಂ. 9/2 ರ ಮ್ಯೂಟೇಷನ್ ಪ್ರತಿ **ನಿ.ಪಿ–13** ಎಂದು, ಸರ್ವೆ ನಂ. 9/4 ಮತ್ತೊಂದು ಸ್ಕೆಚ್ ಪ್ರತಿ **ನಿ.ಪಿ–14** ಎಂದು, ದೊಡ್ಡಬಳ್ಳಾಪುರ ನ್ಯಾಯಾಲಯದ ಓ.ಎಸ್. ನಂ. 27/14 ರ ಪ್ರಧಾನ ಸಿವಿಲ್ ನ್ಯಾಯಾಲಯದ ತೀರ್ಪಿನ ಪ್ರತಿ **ನಿ.ಪಿ–15** ಎಂದು ಮತ್ತು ಸದರಿ ತೀರ್ಪಿನ ಡಿಕ್ರಿ ಪ್ರತಿಯನ್ನು **ನಿ.ಪಿ–16** ಎಂದು ಗುರುತಿಸಿಕೊಂಡಿರುತ್ತಾರೆ. ಪರಿಶೀಲನಾಧಿಕಾರಿಯಾದ ಶ್ರೀ **ಮಲ್ಲಿಕಾರ್ಜುನ ಈಶ್ವರಪ್ಪ ಕಮತಗಿ** ರವರ ಮೌಖಿಕ ಸಾಕ್ಷ್ಯದಲ್ಲಿ ಆ.ಸ.ನೌ–1 ಮತ್ತು 2 ರವರು ದಿನಾಂಕ 17/12/2013 ರಂದು ತಯಾರಿಸಿದ ಮಹಜರ್‌ನ ಜೆರಾಕ್ಸ್ ಪ್ರತಿಯನ್ನು **ನಿ.ಪಿ–17** ಎಂದು ಮತ್ತು ನಿವೇದನೆಯನ್ನು ನಿ.ಪಿ–17(ಎ) ಎಂದು ಗುರುತಿಸಿಕೊಂಡಿರುತ್ತಾರೆ.

12) **ಆ.ಸ.ನೌ.–2** ರವರು ತಮ್ಮ ಪರವಾಗಿ ತಾವೇ **ಡಿ.ಡಬ್ಲ್ಯೂ–1** ಎಂದು ಸಾಕ್ಷ್ಯ ನುಡಿದಿದ್ದು, **ನಿ.ಡಿ.–2 ರಿಂದ 6** ರವರೆಗಿನ ದಾಖಲಾತಿಗಳನ್ನು, **ಆ.ಸ.ನೌ–1** ರವರು ತಮ್ಮ ಪರವಾಗಿ ತಾವೆ

**ಡಿ.ಡಬ್ಲ್ಯೂ–2** ಎಂದು ಮೌಖಿಕ ಸಾಕ್ಷ್ಯ ನುಡಿದಿದ್ದು ನಿ.ಡಿ.–7 ದಾಖಲಾತಿಯನ್ನು ಗುರುತಿಸಿಕೊಂಡಿರುತ್ತಾರೆ. ನಿ.ಪಿ–17 ದಾಖಲೆಯಲ್ಲಿನ ಸಾಕ್ಷಿದಾರರಾದ ಶ್ರೀ **ಎಂ.ಪಿ ನಾಗರಾಜು** ಬಿನ್ ಎಂ.ಎನ್. ಪುಟ್ಟಣ್ಣ, ಚಿಕ್ಕಣ್ಣಪ್ಪ ಕಲ್ಯಾಣಮಂಟಪ, ತ್ಯಾಗರಾಜನಗರ, ದೊಡ್ಡಬಳ್ಳಾಪುರ ರವರನ್ನು **ಡಿ.ಡಬ್ಲ್ಯೂ–3** ಎಂದು ಸಾಕ್ಷ್ಯ ನುಡಿಸಿಕೊಂಡಿದ್ದು ಇವರ ಸಹಿಯನ್ನು **ನಿ.ಡಿ–5(ಎ)** ಎಂದು, ಮತ್ತೊಬ್ಬ ಪಂಚ ಸಾಕ್ಷಿದಾರರಾದ ಶ್ರೀ **ಖಾದರ್ ಸಾಬ್** ಬಿನ್ ಸೈಯದ್ ಕಾಸೀಮ್, ಧರಗ ಜೋಗಹಳ್ಳಿ, ದೊಡ್ಡಬಳ್ಳಾಪುರ ತಾಲ್ಲೂಕು ರವರನ್ನು **ಡಿ.ಡಬ್ಲ್ಯೂ–4** ಎಂದು ಹಾಗೂ ಇನ್ನೊಬ್ಬ ಸಾಕ್ಷಿದಾರರಾದ ಶ್ರೀ **ನಜೀರ್ ಅಹಮದ್** ಬಿನ್ ಪಯಜ್ ಅಹಮದ್, ನಂ. 113, ಚಿಕ್ಕಪೇಟೆ, ಬಾಳೆಕಾಯಿ ಮಂಡಿಯ ಹತ್ತಿರ, ದೊಡ್ಡಬಳ್ಳಾಪುರ ತಾಲ್ಲೂಕು ರವರನ್ನು **ಡಿ.ಡಬ್ಲ್ಯೂ–5** ಎಂದು ಸಾಕ್ಷ್ಯ ನುಡಿಸಿಕೊಂಡಿದ್ದು, ಇವರ ಸಹಿಯನ್ನು **ನಿ.ಡಿ–5(ಬಿ)** ಎಂದು ಗುರುತಿಸಿಕೊಂಡಿರುತ್ತಾರೆ. ದಿನಾಂಕ 17/12/2013 ರಂದು ಫಿರ್ಯಾದುದಾರರು ಸ್ಥಳ ತನಿಖೆಯ ಸಮಯದಲ್ಲಿ ಹಾಜರ್ ಇರಲಿಲ್ಲವೆಂದು ಆದರೆ, ಅವರ ಪತಿಯವರು ಹಾಜರಿದ್ದುದ್ದಾಗಿ, ಸದರಿಯವರು ಆ ದಿವಸ ಆಕ್ಷೇಪಿಸಿ ಮಹಜರ್‌ಗೆ ಸಹಿ ಮಾಡಿರುವುದಿಲ್ಲವೆಂದು ಡಿಡಬ್ಲ್ಯೂ–3 ರಿಂದ 5 ರವರುಗಳು ನಿಖರವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಆದರೆ, ಈ ಆ.ಸ.ನೌ ರವರುಗಳು ಈ ಹಿಂದೆ ದೂರು ವಿಚಾರಣೆ ಕಾಲಕ್ಕೆ ಹೇಳಲಾದಂತೆ ಮತ್ತು ಆರೋಪ ರಚಿಸಲಾದಂತೆ, ದಿನಾಂಕ 03.01.2014 ರಂದು ಅಳತೆ ಮಾಡಿರುವುದಕ್ಕೆ ಮತ್ತು ಅದೇ ದಿನದಂದು ಮಹಜರ್ ವರದಿ ತಯಾರಿಸಿರುವ ಬಗ್ಗೆ ನುಡಿದಿರುವುದಿಲ್ಲ.

13) ಆ.ಸ.ನೌ–2 ರವರ ಪರವಾಗಿ ದೂರುದಾರರಾದ ಪಿಡಬ್ಲ್ಯೂ–1 ರವರನ್ನು ಮಾಡಿದ ಪಾಟೀ ಸವಾಲಿನಲ್ಲಿ, ದಿನಾಂಕ 17/12/2013 ರಂದು ಜಮೀನು ಅಳತೆ ಮಾಡುವ ಬಗ್ಗೆ ಹಾಜರ್ ಇರುವಂತೆ

ಆ.ಸ.ನೌ–2 ರವರು ದೂರುದಾರರಿಗೆ ನೋಟಿಸ್ ನೀಡಿರುವುದನ್ನು ಒಪ್ಪಿಕೊಂಡಿರುತ್ತಾರೆ, ಆ ದಿನ ಆ.ಸ.ನೌ–2 ರವರು ದೂರುದಾರರಿಗೆ ಜಮೀನು ಸ್ವಚ್ಚ ಮಾಡುವಂತೆ ತಿಳಿಸಿದ್ದು, ಸ್ವಚ್ಚ ಮಾಡಿದ ನಂತರವೆ ಅಳತೆ ಮಾಡುವುದಾಗಿ ತಿಳಿಸಿರುತ್ತಾರೆಂಬುದು ಪಾಟೀ ಸವಾಲು ವಿಚಾರಣೆಯಲ್ಲಿ ಕಂಡುಬರುತ್ತದೆ. ಮುಂದುವರೆದು, ಈ ದೂರುದಾರರಿಗೆ ಪುನಹ ನೋಟಿಸ್ ನೀಡಿ ದಿನಾಂಕ 03.04.2014 ರಂದು ಅಳತೆ ಮಾಡುವುದಾಗಿ ಮತ್ತು ಆ ದಿನ ಹಾಜರ್ ಇರುವಂತೆ ತಿಳಿಸಿರುವುದನ್ನು ಒಪ್ಪಿಕೊಂಡಿರುತ್ತಾರೆ. ಆ ದಿನ ದೂರುದಾರರು ಹಾಜರಿದ್ದಿಲ್ಲ ಎಂದು ಸೂಚಿಸಿದ್ದನ್ನು ನಿಜವೆಂದು ಒಪ್ಪಿಕೊಂಡಿರುತ್ತಾರೆ. ಸದರಿ ದಿನದಂದು ಅಂದರೆ ದಿನಾಂಕ 03/04/2014 ರಂದು ಅಳತೆ ಮಾಡುವ ಕಾಲಕ್ಕೆ ತನ್ನ ಗಂಡನಾದ ಶ್ರೀ ಕೃಷ್ಣಮೂರ್ತಿ ರವರು ಹಾಜರಿದ್ದು ಸಹಿ ಮಾಡಲು ನಿರಾಕರಿಸಿರುವುದನ್ನು ಒಪ್ಪಿಕೊಂಡಿರುತ್ತಾರೆ. **ಅಲ್ಲದೆ, ಈ ಆ.ಸ.ನೌ–2 ರವರು ಆ ದಿನ ತನ್ನ ಜಮೀನು ಸರ್ವೆ ಮಾಡಿರುವುದಿಲ್ಲ ಹಾಗೂ ತನ್ನ ಜಮೀನಿನ ಗಡಿ ಕಲ್ಲು ಹಾಕಿರುವುದಿಲ್ಲವೆಂದು ಸ್ಪಷ್ಟವಾಗಿ ನುಡಿದಿರುತ್ತಾರೆ.** ಈ ಅಂಶವನ್ನು ಪರಿಶೀಲಿಸಿದಾಗ ಈ ಆ.ಸ.ನೌ ರವರುಗಳು ಹೇಳುವಂತೆ ದಿನಾಂಕ 17/12/2013 ರಂದು ದೂರುದಾರರ ಜಮೀನು ಅಳತೆ ಮಾಡಿರುವುದಿಲ್ಲವೆಂಬುದು ಕಂಡುಬರುತ್ತದೆ. ಅದೇ ಪ್ರಕಾರ **ನಿ.ಪಿ–17** ಪಂಚನಾಮೆಯನ್ನು ಪರಿಶೀಲಿಸಿದಾಗ ದಿನಾಂಕ 17/12/2013 ರಂದು ಪಂಚರ ಸಮಕ್ಷಮದಲ್ಲಿ ಮಾಡಿರುವುದಾಗಿ ಹೇಳಿರುತ್ತಾರೆ. ಈ ಕಾರಣದಿಂದಲೆ ದೂರುದಾರರು ಈ ಲೋಕಾಯುಕ್ತ ಸಂಸ್ಥೆಗೆ ದಿನಾಂಕ 05/05/2014 ರಂದು ದೂರು ಸಲ್ಲಿಸಿರುವುದು ಕಂಡುಬರುತ್ತದೆ. ಒಂದು ವೇಳೆ ಈ ಆ.ಸ.ನೌ ರವರುಗಳು ಹೇಳುವಂತೆ ದಿನಾಂಕ 17/12/2013 ರಂದು ದೂರುದಾರರ ಜಮೀನನ್ನು ಅಳತೆ ಮಾಡಿದ್ದಲ್ಲಿ ಅವರು ಪುನಹ ಈ ಲೋಕಾಯುಕ್ತ ಸಂಸ್ಥೆಗೆ ದೂರು ಸಲ್ಲಿಸುವ ಪ್ರಮೆಯ ಉಂಟಾಗುತ್ತಿರಲಿಲ್ಲ. ಈ ಆ.ಸ.ನೌ ರವರುಗಳು ಆರೋಪ ರಚಿಸಲಾದಂತೆ ದಿನಾಂಕ

03/01/2014 ರಂದು ಮಹಜರ್ ವರದಿಗೆ ಗ್ರಾಮಸ್ಥರ ಸಹಿ ಪಡೆದಿದ್ದಾಗಿಯೂ ಅದು ವಾಸ್ತವಿಕವಾಗಿ ಸದರಿ ದಿನದಂದು ಮಾಡಿರುವುದಿಲ್ಲವೆಂದು ಕಂಡುಬರುತ್ತದೆ. ಆ.ಸ.ನೌ–1 ಮತ್ತು 2 ರವರು ತಮ್ಮ ರಕ್ಷಣಾ ಹೇಳಿಕೆ ನಿ.ಡಿ.–3 ರಲ್ಲಿ ದಿನಾಂಕ 03.01.2014 ರಂದು ಈ ದೂರುದಾರರ ಜಮೀನು ಅಳತೆ ಮಾಡಿರುವ ಬಗ್ಗೆ ಸ್ಪಷ್ಟವಾಗಿ ಹೇಳಿರುವುದಿಲ್ಲ. ಮುಂದುವರೆದು, ಈ ಆ.ಸ.ನೌ ರವರುಗಳು ನಿ.ಪಿ–17 ರಲ್ಲಿ ಕಾಣಿಸಿದಂತೆ ದೂರುದಾರರ ಜಮೀನನ್ನು ಅಳತೆ ಮಾಡಿ ಗಡಿ ಗುರುತು ತೋರಿಸಿರುವುದಿಲ್ಲವೆಂಬುದು ಕಂಡು ಬರುತ್ತದೆ. ಈ ಆ.ಸ.ನೌ ರವರುಗಳ ಪರ ವಕೀಲರು ದೂರುದಾರರಿಗೆ ಪಾಟೀ ಸವಾಲಿನಲ್ಲಿ ಸೂಚಿಸಿರುವ ಸಲಹೆಯನ್ನು ಪರಿಶೀಲಿಸಿದಾಗ ದಿನಾಂಕ 17/12/2013 ರಂದು ದೂರುದಾರರ ಜಮೀನು ಅಳತೆ ಮಾಡಿರುವುದಿಲ್ಲ ಎಂಬುದನ್ನು ಒಪ್ಪಿಕೊಂಡಿರುತ್ತಾರೆ. ಪುನಹ ನೋಟಿಸ್ ನೀಡಿ ದಿನಾಂಕ 03/04/2014 ರಂದು ಹಾಜರ್ ಇರುವಂತೆ ದೂರುದಾರರಿಗೆ ಹೇಳಿರುವುದನ್ನು ಒಪ್ಪಿಕೊಂಡಿರುತ್ತಾರೆ. ಸದರಿ ದಿನದಂದು ಅಳತೆ ಮಾಡಿರುವುದಾಗಿ ಸೂಚಿಸಿರುವುದನ್ನು ದೂರುದಾರರು ನಿರಾಕರಿಸಿರುತ್ತಾರೆ. ಆದರೆ, ಸದರಿ ದಿನದಂದು ದೂರುದಾರರು ತಮ್ಮ ಜಮೀನು ಅಳತೆ ಮಾಡಿ ಗಡಿ ಗುರುತಿಸಿರುವುದಿಲ್ಲವೆಂದು ಸ್ಪಷ್ಟವಾಗಿ ನುಡಿದಿರುತ್ತಾರೆ.

14) ಶಿಸ್ತು ಪ್ರಾಧಿಕಾರವು ಮುಂದುವರೆದು, ಪಿಡಬ್ಲ್ಯೂ–2 ಪರಿಶೀಲನಾ ಅಧಿಕಾರಿಗಳ ಸಾಕ್ಷ್ಯ ನುಡಿಸಿಕೊಂಡಿದ್ದು ಇವರು ಈ ಕೆಳಕಂಡಂತೆ ನುಡಿದಿರುತ್ತಾರೆ:–

" ದೂರು, ಆಕ್ಷೇಪಣೆಗಳು ಮತ್ತು ಉಭಯತ್ರರರ ದಾಖಲೆಗಳನ್ನು ಪರಿಶೀಲಿಸಿದಾಗ, ದೂರುದಾರರು ಜಮೀನು ಮೋಜಣಿ ಮಾಡುವಂತೆ ಕೋರಿ ಹಣ ಕಟ್ಟಿದ ರಸೀದಿ ಮತ್ತು ಎದುರುದಾರರಿಗೆ ಸಲ್ಲಿಸಿದ ಅರ್ಜಿಯ

**ಪ್ರತಿಗಳನ್ನು ಲಗತ್ತಿಸಿರುತ್ತಾರೆ. ಅದರೆ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದಿ: 03/01/2014 ರಂದು ಜಮೀನನ್ನು ಅಳತೆ ಮಾಡಿ ಗ್ರಾಮಸ್ಥರ ಸಹಿ ಪಡೆದು ಮಹಜರ್ ಸಲ್ಲಿಸಿರುತ್ತಾರೆ. ಆದ್ದರಿಂದ ಒಂದು ವೇಳೆ ಜಮೀನನ್ನು ಅಳತೆ ಮಾಡಿ ವರದಿ ಸಲ್ಲಿಸಿದ್ದರೆ, ಈ ದೂರನ್ನು ಸಲ್ಲಿಸುವ ಪ್ರಶ್ನೇ ಉದ್ಭವಿಸುತ್ತಿರಲಿಲ್ಲ. ಹಾಗೂ ವರದಿಗೆ ಗ್ರಾಮಸ್ಥರ ಸಹಿ ಮಾತ್ರ ಇದ್ದು, ದೂರುದಾರರ ಸಹಿ ಇರುವುದಿಲ್ಲ. ಆದ್ದರಿಂದ ಆಸನೌ–1 ಮತ್ತು 2 ರವರು ದೂರುದಾರರ ಜಮೀನ್ನು ಅಳತೆ ಮಾಡದೇ ಸುಳ್ಳು ಮಹಜರ್ ತಯಾರಿಸಿದ್ದಾರೆಂದು ಕಂಡುಬರುತ್ತದೆ. ಅಲ್ಲದೇ ದೂರುದಾರರ ಗಂಡ ಭೂ ಮಾಪಕರ ವರದಿಗೆ ಏಕೆ ಸಹಿ ಮಾಡಿರುವುದಿಲ್ಲವೆಂದು ಕಾರಣವನ್ನು ವರದಿಯಲ್ಲಿ ನಮೂದಿಸಿರುವುದಿಲ್ಲ. ಆದ್ದರಿಂದ ಇದು ಒಂದು ಖೊಟ್ಟಿ ವರದಿಯನ್ನು ತಯಾರಿಸಿ ಸಲ್ಲಿಸಿದ್ದು, ಮೇಲ್ನೋಟಕ್ಕೆ ಕಂಡುಬಂದಿರುತ್ತದೆ."**

ಈ ರೀತಿ ನುಡಿದಿರುವುದನ್ನು ಪರಿಶೀಲಿಸಿದಾಗ ಈ ಆ.ಸ.ನೌ ರವರುಗಳು ತಯಾರಿಸಿರುವ ನಿ.ಡಿ.–4 ಮತ್ತು 5 ದಾಖಲೆಗಳನ್ನು ಪರಿಶೀಲಿಸಿದಾಗ ಈ ಆ.ಸ.ನೌ–1 ಮತ್ತು 2 ರವರುಗಳು ದಿನಾಂಕ 17/12/2013 ರಂದು ಪಂಚನಾಮೆ ಮಾಡಿರುವುದಾಗಿ ಅದನ್ನು ದಿನಾಂಕ 03/01/2014 ರಂದು ಅಂಗೀಕರಿಸಿರುವುದಾಗಿ ದಾಖಲೆಗಳನ್ನು ಸೃಷ್ಟಿಸಿರುವುದು ಕಂಡುಬರುತ್ತದೆ. ಈ ಆ.ಸ.ನೌ ರವರುಗಳು ನಿರ್ದಿಷ್ಟವಾಗಿ ತಮ್ಮ ರಕ್ಷಣಾ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಮತ್ತು ದಿನಾಂಕ 03/01/2014 ರಂದಾಗಲೀ ಅಥವಾ 17/12/2013 ರಂದು ದೂರುದಾರರ ಜಮೀನು ಸರ್ವೆ ನಂ. 9/2 ಮೋಜಣಿ ಮಾಡಿ ಗಡಿ ಗುರ್ತಿಸಿರುವುದನ್ನು ರುಜುವಾತುಪಡಿಸಿರುವುದಿಲ್ಲ. ಅಲ್ಲದೆ, ದಿನಾಂಕ 03/01/2014 ರಂದು ಅಳತೆ ಮಾಡಿರುವುದಾಗಿ ಆದರಿಸುವ ದಾಖಲೆಗಳಿಗೆ ದೂರುದಾರರ ಪತಿಯಾದ ಶ್ರೀ ಜಿ. ಕೃಷ್ಣಮೂರ್ತಿ ಎಂಬುವರು ಯಾವ ಕಾರಣಕ್ಕೆ ಸಹಿ ಮಾಡಿರುವುದಿಲ್ಲವೆಂಬುದನ್ನು

ರುಜುವಾತುಪಡಿಸಿರುವುದಿಲ್ಲ. ಅಲ್ಲದೆ, ಪಿಡಬ್ಲ್ಯೂ-2 ರವರನ್ನು ಈ ಆ.ಸ.ನೌ ರವರುಗಳು ಪಾಟೀ ಸವಾಲು ವಿಚಾರಣೆಗೆ ಒಳಪಡಿಸಿರುವುದಿಲ್ಲ ಮತ್ತು ಮುಖ್ಯ ವಿಚಾರಣೆಯಲ್ಲಿ ನುಡಿದಿರುವ ಸಾಕ್ಷ್ಯವನ್ನು ನಿರಾಕರಿಸಿರುವುದಿಲ್ಲ. ಈ ರೀತಿ ಈ ಆ.ಸ.ನೌ ರವರುಗಳು ದೂರುದಾರರ ಜಮೀನನ್ನು ಅಳತೆ ಮಾಡದೆ ಖೊಟ್ಟಿ ವರದಿಯನ್ನು ತಯಾರಿಸಿ ದುರ್ನಡತೆ ತೋರಿ ಕರ್ತವ್ಯಲೋಪವೆಸಗಿರುವುದು ರುಜುವಾತಾಗುತ್ತದೆ.

15) ಈ ಎಲ್ಲಾ ಕಾರಣಗಳಿಂದ ಶಿಸ್ತು ಪ್ರಾಧಿಕಾರದವರು ಆ.ಸ.ನೌ–1 ಶ್ರೀ. **ಜೆ.ಡಿ. ಶಿವಲಿಂಗಯ್ಯ (ನಿವೃತ್ತ)** ಪರ್ಯಾವೇಕ್ಷಕರು, ತಾಲ್ಲೂಕು ಕಛೇರಿ, ದೊಡ್ಡಬಳ್ಳಾಪುರ ತಾಲ್ಲೂಕು ಮತ್ತು **ಆ.ಸ.ನೌ–2 ಶ್ರೀ ಶ್ರೀಧರ ಎನ್.ಸಿ.,** ಭೂಮಾಪಕರು, ತಾಲ್ಲೂಕು ಕಛೇರಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರುಗಳ ವಿರುದ್ಧ ಹೊರಿಸಲಾದ ಆಪಾದನೆ ದುರ್ನಡತೆ ಮತ್ತು ಕರ್ತವ್ಯಲೋಪಗಳನ್ನು ರುಜುವಾತುಪಡಿಸುವಲ್ಲಿ ಯಶಸ್ವಿಯಾಗಿರುತ್ತಾರೆಂದು ನಿರ್ಣಯಿಸಲಾಗಿದೆ. ಅಲ್ಲದೇ, ಶಿಸ್ತು ಪ್ರಾಧಿಕಾರದವರು ನೀಡಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯಗಳು, ಆ.ಸ.ನೌ–1 ಮತ್ತು 2 ರವರುಗಳ ಕರ್ತವ್ಯಲೋಪ ಮತ್ತು ದುರ್ನಡತೆ ಎಸಗಿರುವ ಹೆಚ್ಚಿನ ಸಂಭವನೀಯತೆ (probabilities) ಕಂಡು ಬರುತ್ತದೆ. ಈ ಎಲ್ಲಾ ಕಾರಣಗಳಿಂದ ಅಂಶ 1 ಕ್ಕೆ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

**ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.**

# ಆದೇಶ

ಶಿಸ್ತು ಪ್ರಾಧಿಕಾರದವರು ಆ.ಸ.ನೌ–1 ಶ್ರೀ. **ಜೆ.ಡಿ. ಶಿವಲಿಂಗಯ್ಯ (ನಿವೃತ್ತ),** ಪರ್ಯಾವೇಕ್ಷಕರು, ತಾಲ್ಲೂಕು ಕಛೇರಿ, ದೊಡ್ಡಬಳ್ಳಾಪುರ ತಾಲ್ಲೂಕು ಮತ್ತು **ಆ.ಸ.ನೌ–2** ಶ್ರೀ. **ಶ್ರೀಧರ ಎನ್.ಸಿ.,** ಭೂಮಾಪಕರು, ತಾಲ್ಲೂಕು ಕಛೇರಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರುಗಳ ವಿರದ್ಧದ ಆಪಾದನೆಯನ್ನು **ರುಜುವಾತುಪಡಿಸಲಾಗಿದೆ** ಎಂದು ನಿರ್ಣಯಿಸಲಾಗಿದೆ.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ–2 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

10/3/..

( ಸೆಲ್ವಕುಮಾರ್.ಸಿ )
ಅಪರ ನಿಬಂಧಕರು ವಿಚಾರಣೆಗಳು–16,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

# KARNATAKA LOKAYUKTA

No.UPLOK-2/DE/898/2017/ARE-16

Multi Storied Building,
Dr. B.R. Ambedkar Veedhi,
Bengaluru-560 001.
Dated 18.03.2021.

## RECOMMENDATION

Sub:- Departmental inquiry against (1) Sri Shivalingaiah.J.D., Survey Supervisor, and (2) Sri Sridhar.N.C., Surveyor, Taluk Office, Doddaballapur, Bangalore Rural District - reg.

Ref:- 1) Government Order No.RD 18 BDS (3) 2017 Dated 03.07.2017.

2) Nomination order No. UPLOK-2/ DE/898/2017 dated 21.07.2017 of Upalokayukta, State of Karnataka.

3) Inquiry report dated 10.03.2021 of Additional Registrar of Enquiries-16, Karnataka Lokayukta, Bengaluru.

~~~~~

The Government by its order dated 03.07.2017 initiated the disciplinary proceedings against (1) Sri Shivalingaiah.J.D., Survey Supervisor, and (2) Sri Sridhar.N.C., Surveyor, Taluk Office, Doddaballapur, Bangalore Rural District, [hereinafter referred to as Delinquent Government Officials, for short as 'DGOs 1 and 2' respectively ] and entrusted the departmental inquiry to this Institution.
~~~~~

2. This Institution by Nomination Order No. UPLOK-2/ DE/898/2017 dated 21.07.2017 nominated Additional Registrar of Enquiries-10, Karnataka Lokayukta, Bengaluru, as the Inquiry Officer to frame charges and to conduct departmental inquiry against DGOs for the alleged charge of misconduct, said to have been committed by them. Subsequently, by order No.Uplok-1&2/DE/Transfers/2020 dated 28.05.2020, the Additional Registrar of Enquiries-16, Karnataka Lokayukta, Bengaluru, was re-nominated as the Inquiry Officer to continue the said departmental inquiry against DGOs.

3. The DGO 1 Sri Shivalingaiah.J.D., Survey Supervisor, and DGO 2 Sri Sridhar.N.C., Surveyor, Taluk Office, Doddaballapur, Bangalore Rural District, were tried for the following charges :-

> " 1ನೇ ಆಪಾದಿತ ಸರ್ಕಾರಿ ನೌಕರ ಆದ ಶ್ರೀ ಜೆ.ಡಿ. ಶಿವಲಿಂಗಯ್ಯ, ಪರ್ಯಾವೇಕ್ಷಕರು, ದೊಡ್ಡಬಳ್ಳಾಪುರ ತಾಲ್ಲೂಕು ಕಛೇರಿ, 2ನೇ ಆಪಾದಿತ ಸರ್ಕಾರಿ ನೌಕರ ಶ್ರೀ ಶ್ರೀಧರ್ ಎನ್.ಸಿ. ಭೂಮಾಪಕರು, ದೊಡ್ಡಬಳ್ಳಾಪುರ ತಾಲ್ಲೂಕು ಕಛೇರಿ ಆದ ನೀವುಗಳು, ದೂರುದಾರರಾದ ಶ್ರೀಮತಿ ಮಂಜುಳ ಇವರು ದೊಡ್ಡಬಳ್ಳಾಪುರ ತಾಲ್ಲೂಕು ದರ್ಗಾ ಜೋಗಿಹಳ್ಳಿ ಗ್ರಾಮದ ಸರ್ವೆ ನಂ. 9/2 ವಿಸ್ತೀರ್ಣ 9 ಗುಂಟೆಗೆ ಗಡಿಕಲ್ಲು ನಾಶವಾಗಿರುವುದರಿಂದ ಅಳತೆ ಮಾಡಿ, ಗಡಿ ಗುರುತಿಸಿ ಕಲ್ಲು ನೆಡುವಂತೆ ಅರ್ಜಿಯನ್ನು ಸಲ್ಲಿಸಿದರೂ ಸಹ, 1 ಮತ್ತು 2ನೇ ಆ.ಸ.ನೌಕರರಾದ ನೀವು ದಿನಾಂಕ 03.01.2014 ರಂದು ಅಳತೆಯನ್ನು ಮಾಡದೆ, ಸುಳ್ಳು ಮಹಜರ್ ವರದಿಯನ್ನು ಸಲ್ಲಿಸಿದ್ದೀರಿ.
>
> ಆದಕಾರಣ ಆಪಾದಿತ ಸರ್ಕಾರಿ ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ

ರೀತಿಯಲ್ಲಿ ನಡೆದುಕೊಂಡಿದ್ದು, ಆಪಾದಿತ ಸರ್ಕಾರಿ ನೌಕರರಾದ ನೀವು ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮಾವಳಿ 1966ರ ನಿಯಮ (3)(1) (i) ರಿಂದ (iii)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ."

4. The Inquiry Officer (Additional Registrar of Enquiries-16) on proper appreciation of oral and documentary evidence has held that, the above charge against the DGO 1 Sri Shivalingaiah.J.D., Survey Supervisor, and DGO 2 Sri Sridhar.N.C., Surveyor, Taluk Office, Doddaballapur, Bangalore Rural District, is ' proved'.

5. On re-consideration of report of inquiry and all other materials on record, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of Inquiry Officer.

6. As per the First Oral Statement of the DGOs recorded by the Enquiry Officer,

i) DGO 1 Sri Shivalingaiah.J.D. has retired from service on 31-03-2015, and
ii) DGO 2 Sri Sridhar.N.C., is due to retire from service on 30-06-2036.

7. Having regard to the nature of charge '*proved*' against the DGOs and considering the totality of circumstances, it is

hereby recommended to the Government to impose penalty of:

i) 'withholding 05%(five) of pension payable to DGO.1 Sri Shivalingaiah for a period of three years, and

ii) 'withholding one annual increment payable to DGO 2 Sri Sridhar.N.C. with cumulative effect.'

8. Action taken in the matter shall be intimated to this Authority.

Connected records are enclosed herewith.

18/3

**(JUSTICE B.S.PATIL)**
**Upalokayukta,**
**State of Karnataka.**

*BS**